# ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ

**(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)**

**ನಂ.6/13/1. 10ನೇ ಬ್ಲಾಕ್, 2ನೇ ಹಂತ, ನಾಗರಭಾವಿ, ಬೆಂಗಳೂರು-560 072.**

https://kredl.karnataka.gov.in

ಕೆ.ಆರ್.ಇ.ಡಿ.ಎಲ್/01/ಆಡಳಿತ/04/2023/ ದಿನಾಂಕ: 25.10.2023

## ಅಧಿಸೂಚನೆ

ಗುತ್ತಿಗೆ ಆಧಾರದ ಮೇಲೆ ನೇಮಕಾತಿ

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು (ಕೆ.ಆರ್.ಇ.ಡಿ.ಎಲ್) ರಾಜ್ಯ ಸರ್ಕಾರದ ಇಂಧನ ಇಲಾಖೆಯ ಆಡಳಿತ ವ್ಯಾಪ್ತಿಯಲ್ಲಿ ನವ ಮತ್ತು ನವೀಕರಿಸಬಹುದಾದ ಇಂಧನ ಮೂಲಗಳನ್ನು ಅಭಿವೃದ್ಧಿ ಪಡಿಸುವ "ನೋಡಲ್ ಏಜನ್ಸಿ"ಯಾಗಿ ಮಾರ್ಚ್ 8, 1996 ರಂದು ಸ್ಥಾಪಿತವಾಗಿದೆ. ಸಂಸ್ಥೆಯ ಕಾನೂನು ವ್ಯವಹಾರಗಳಿಗೆ ಸಂಬಂಧಿಸಿದಂತೆ ವಿವಿಧ ನ್ಯಾಯಾಲಯಗಳಲ್ಲಿ ಕಾನೂನು ವಿಷಯಗಳಲ್ಲಿ ತೆಗೆದುಕೊಳ್ಳಬೇಕಾದ ಕ್ರಮದ ಬಗ್ಗೆ, ನಿರ್ವಹಣೆಗೆ ಹಾಗೂ ಸದರಿ ಕಾನೂನು ಪ್ರಕರಣಗಳನ್ನು ಸೂಕ್ತವಾಗಿ ನಿಯತಕಾಲಿಕವಾಗಿ ಅನುಸರಣೆ ಮಾಡಲು ಮತ್ತು ಇಲಾಖಾ ಸಿಬ್ಬಂದಿಗಳಿಗೆ ನ್ಯಾಯಾಲಯ ಪ್ರಕರಣಗಳಲ್ಲಿ ವಹಿಸಬೇಕಾದ ಕಾನೂನು ಕ್ರಮಗಳ ಬಗ್ಗೆ ತಿಳುವಳಿಕೆ ನೀಡಲು ಅನುವಾಗುವಂತೆ ಒಬ್ಬ ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರನ್ನು ಗುತ್ತಿಗೆ ಆಧಾರದ ಮೇಲೆ ಕಾನೂನು ಸಲಹೆಗಾರರಾಗಿ ಪಡೆಯಲು ಉದ್ದೇಶಿಸಲಾಗಿದೆ. ಅರ್ಹತೆಯ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

| ಕ್ರ. ಸಂ | ವಿವರಗಳು | |
|---|---|---|
| 1. | ಗುತ್ತಿಗೆ ಆಧಾರದ ಹುದ್ದೆಯ ಹೆಸರು | ಕಾನೂನು ಸಲಹೆಗಾರರು - ಪೂರ್ಣಾವಧಿ |
| 2. | ಹುದ್ದೆಗಳ ಸಂಖ್ಯೆ | 01 (ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು) |
| 3. | ವಯೋಮಿತಿ | 60 ರಿಂದ 70 ವರ್ಷದ ಒಳಗಿರುವವರು (ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು) |
| 4. | ಅರ್ಹತೆ | ನಿವೃತ ನ್ಯಾಯಾಧೀಶರು (ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ) ಹಾಗೂ ಈ ಕೆಳಕಂಡ ಕಾನೂನು ವಿಷಯಗಳ ಬಗ್ಗೆ ಅನುಭವ/ಜ್ಞಾನ ಹೊಂದಿರತಕ್ಕದ್ದು. |

| | | |
|---|---|---|
| | | ➢ ಸಿವಿಲ್, ಕ್ರಿಮಿನಲ್, ಲೇಬರ್, ಕಂಪನಿ ಕಾಯ್ದೆ, ವಿದ್ಯುತ್ ಕಾಯ್ದೆ, ವಿದ್ಯುತ್ ಖರೀದಿ ಹಾಗೂ ರೆಗ್ಯೂಲೇಟರಿ ಅಫೇರ್ಸ್ ವಿಷಯಗಳ ಬಗ್ಗೆ ಪರಿಣತಿಯನ್ನು ಹೊಂದಿರತಕ್ಕದ್ದು.<br>➢ ಕನ್ನಡ ಭಾಷೆಯ ಕಡ್ಡಾಯ.<br>➢ ಕರ್ನಾಟಕ ಅಭ್ಯರ್ಥಿಗಳಿಗೆ ಮೊದಲ ಆದ್ಯತೆ.<br>➢ ಸದರಿ ಅನುಭವದ ಕುರಿತು ಪೂರಕ ದೃಢೀಕೃತ ದಾಖಲೆಗಳನ್ನು ಸಲ್ಲಿಸತಕ್ಕದ್ದು. (ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಿಗೆ ಮಾತ್ರ) |
| 5. | ವೇತನ ಹಾಗೂ ಇತರೆ ಸೌಲಭ್ಯಗಳು | 1. ಸದರಿ ಹುದ್ದೆಗೆ ಮಾಹೆಯಾನ ಸಂಭಾವನೆ ರೂ.65,000/- (ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಿಗೆ ಮಾತ್ರ) (ಪ್ರಸ್ತುತ ಪಡಿಯುತ್ತಿರುವ ಪಿಂಚಣಿ ಹಾಗೂ ನಿಗಮದಿಂದ ಪಾವತಿಸಲಾಗುವ ಸಂಭಾವನೆ ಸೇರಿ ಅವರ ನಿವೃತ್ತಿ ಸಮಯದಲ್ಲಿ ಪಡೆಯುತ್ತಿದ್ದ ವೇತನವನ್ನು ಮೀರುವಂತಿಲ್ಲ) Subject to deduction of Income tax as per rules.<br>2. ಕಾರ್ಯ ಸ್ಥಳವು ಬೆಂಗಳೂರು ಆಗಿರುತ್ತದೆ. ಕಛೇರಿ ಕೆಲಸದ ನಿಮಿತ್ಯ ಅವಶ್ಯಕವಾಗಿ ಪ್ರಯಾಣ ಮಾಡಬೇಕಾಗಿ ಬಂದಲ್ಲಿ, ನಿಗಮದಲ್ಲಿ ಪ್ರಧಾನ ವ್ಯವಸ್ಥಾಪಕರಿಗೆ ಲಭ್ಯವಿರುವ ಪ್ರಯಾಣ / ದಿನ ಭತ್ಯೆಗೆ ಅರ್ಹರಿರುತ್ತಾರೆ.<br>3. ಕಂಪನಿಯಲ್ಲಿ ಚಾಲ್ತಿಯಲ್ಲಿರುವ ನಿಯಮಗಳನುಸಾರ ದೂರವಾಣಿ/ಮೊಬೈಲ್ ಸೌಲಭ್ಯ ಹಾಗೂ ಒಂದು ಬಾಡಿಗೆ ಆಧಾರದಲ್ಲಿ ವಾಹನ.<br>4. ತಿಂಗಳಿಗೆ ಒಂದು ಸಾಂದರ್ಭಿಕ ರಜೆ ನೀಡಲಾಗುವುದು |
| 6. | ಗುತ್ತಿಗೆ ಅವಧಿ | ಕನಿಷ್ಟ ಎರಡು ವರ್ಷಗಳು ಹಾಗೂ ಸದರಿ ಸೇವೆ ತೃಪ್ತಿಕರವಾಗಿದ್ದಲ್ಲಿ ಸೇವೆಯನ್ನು ಪುನ: ಒಂದು ವರ್ಷಕ್ಕೆ ವಿಸ್ತರಣೆ ಮಾಡಲಾಗುವುದು. |
| 7. | ಆಯ್ಕೆ ವಿಧಾನ | ಸಂದರ್ಶನದ ಮುಖಾಂತರ ಆಯ್ಕೆ ಮಾಡಲಾಗುವುದು.<br>➢ ಅಭ್ಯರ್ಥಿಗಳ ಆಯ್ಕೆ ಕುರಿತು ಕಂಪನಿಯ ತೀರ್ಮಾನವೇ ಅಂತಿಮವಾಗಿರುತ್ತದೆ. |
| 8. | ಸಲ್ಲಿಸಬೇಕಾದ ದಾಖಲೆಗಳು | ಈ ಕೆಳಕಂಡದಾಖಲೆಗಳನ್ನು ದೃಢೀಕರಿಸಿ (Self Attested) ಹಾಜರುಪಡಿಸುವುದು: |

| | | |
|---|---|---|
| | | 1. ಜನ್ಮ ದಿನಾಂಕಕ್ಕೆ ಆಧಾರವಾಗಿ ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯ ಅಂಕಪಟ್ಟಿ.<br>2. ಸೇವೆಯಿಂದ ಬಿಡುಗಡೆ ಹೊಂದಿರುವ ಬಗ್ಗೆ ದಾಖಲೆ.<br>3. ನಿವೃತ್ತ ಸಮಯದಲ್ಲಿ ಪಡೆದ ವೇತನ ಪಟ್ಟಿ ( Last pay drawn salary slip) ಹಾಗೂ ಪ್ರಸ್ತುತ ಪಡೆಯುತ್ತಿರುವ ಪಿಂಚಣಿ ಪಟ್ಟಿ (pension slip).<br>4. ಒಂದು ಇತ್ತೀಚಿನ ಭಾವಚಿತ್ರ. |
| 9. | ಅರ್ಜಿ ಶುಲ್ಕ | ರೂ. 500/-ಗಳ ಮೊತ್ತವನ್ನು ಡಿ.ಡಿ. ಮೂಲಕ "ಕೆ.ಆರ್.ಇ.ಡಿ.ಎಲ್, ಬೆಂಗಳೂರು" ಹೆಸರಿನಲ್ಲಿ ಪಾವತಿಸುವುದು.<br>ಅರ್ಜಿ ಶುಲ್ಕ ಹಿಂತಿರುಗಿಸಲಾಗುವುದಿಲ್ಲ. |
| 10. | ಅರ್ಜಿ ಸಲ್ಲಿಸುವ ವಿಧಾನ | ಅಭ್ಯರ್ಥಿಗಳು ಸಂಸ್ಥೆಯ ವೆಬ್ ಸೈಟ್ https://kredl.karnataka.gov.in ನಲ್ಲಿ ಲಭ್ಯವಿರುವ ನಿಗದಿತ ಅರ್ಜಿ ನಮೂನೆಯಲ್ಲಿ ಮಾಹಿತಿಗಳನ್ನು ಭರ್ತಿ ಮಾಡಿ ವಿದ್ಯಾರ್ಹತೆ / ಅನುಭವಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿ kredlmd@gmail.com ಗೆ ಇ-ಮೇಲ್ ಅಥವಾ ಈ ಕೆಳಗಿನ ವಿಳಾಸಕ್ಕೆ ಅಂಚೆ ಮೂಲಕ ದಿನಾಂಕ: 10.11.2023 ರ ಸಂಜೆ 05-30 ಗಂಟೆಯೊಳಗೆ ಸಲ್ಲಿಸತಕ್ಕದ್ದು. ನಿಗದಿತ ಸಮಯ /ದಿನಾಂಕದ ನಂತರ ಸ್ವೀಕೃತಿಗೊಂಡ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಇತರೆ ಯಾವುದೇ ನಮೂನೆಯಲ್ಲಿ ಅರ್ಜಿಯನ್ನು ಸ್ವೀಕರಿಸಲಾಗುವುದಿಲ್ಲ.<br><br>ವಿಳಾಸ :<br>ವ್ಯವಸ್ಥಾಪಕ ನಿರ್ದೇಶಕರು<br>ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ನಂ.6/13/1. 10ನೇ ಬ್ಲಾಕ್,<br>2ನೇ ಹಂತ, ನಾಗರಭಾವಿ,<br>ಬೆಂಗಳೂರು-560 072. |
| 11. | ಸಾಮಾನ್ಯ ಸೂಚನೆಗಳು | ಅ) ಈ ಗುತ್ತಿಗೆ ಆಧಾರದ ನೇಮಕಾತಿಯು ನಿಗಮದ ನಿಬಂಧನೆ ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತದೆ. ಆಯ್ಕೆಯಾದ ಅಭ್ಯರ್ಥಿಗಳು ರೂ. 200/-ಗಳ ಮೌಲ್ಯದ ಎಂಬೋಸ್ ಮಾಡಿದ ಛಾಪ ಕಾಗದದಲ್ಲಿ ನಿಗಮದೊಂದಿಗೆ ಸೇವಾ ಒಪ್ಪಂದವನ್ನು ಮಾಡಿಕೊಳ್ಳತಕ್ಕದ್ದು.<br>ಆ) ಗುತ್ತಿಗೆ ಆಧಾರದ ಮೇಲೆ ನೇಮಕಾತಿಯು ಸಂಪೂರ್ಣವಾಗಿ ತಾತ್ಕಾಲಿಕವಾಗಿರುತ್ತದೆ.<br>ಇ) ಅಭ್ಯರ್ಥಿಗಳ ಗುತ್ತಿಗೆ ಅವಧಿಯ ಮಧ್ಯದಲ್ಲಿ ಸೇವೆಯಿಂದ ರಾಜೀನಾಮೆ ಕೊಡಲು |

| | | |
|---|---|---|
| | | ಇಚ್ಛಿಸಿದಲ್ಲಿ ಒಂದು ತಿಂಗಳ ಮೊದಲು ನೋಟಿಸ್ ನೀಡತಕ್ಕದ್ದು.<br>ಈ) ಸಂಸ್ಥೆಯು ಈ ಗುತ್ತಿಗೆ ಆಧಾರದ ನೇಮಕಾತಿಯನ್ನು ಭಾಗಶ:/ಪೂರ್ಣವಾಗಿ ಯಾವುದೇ ಹಂತದಲ್ಲಿ ಯಾವುದೇ ಕಾರಣ ನೀಡದ ರದ್ದುಪಡಿಸುವ ಅಧಿಕಾರವನ್ನು ಹೊಂದಿದೆ. |
| 12. | ಸಂದರ್ಶನಕ್ಕೆ ಹಾಜರಾಗಬೇಕಾದ ಸಂದರ್ಭದಲ್ಲಿ ನಿಗಮದಿಂದ ಯಾವುದೇ ಪ್ರಯಾಣ / ದಿನಭತ್ಯೆ (TA / DA) ನೀಡಲಾಗುವುದಿಲ್ಲ. | |

# ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ

**(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)**

**ನಂ.6/13/1. 10ನೇ ಬ್ಲಾಕ್, 2ನೇ ಹಂತ, ನಾಗರಭಾವಿ, ಬೆಂಗಳೂರು-560 072.**

**ದೂರವಾಣಿ: 080-22282220,** https://kredl.karnataka.gov.in

| ಕ್ರ.ಸಂ | ವಿವರಗಳು | |
|---|---|---|
| 1. | ಅರ್ಜಿದಾರರ/ಅಭ್ಯರ್ಥಿಯ ಹೆಸರು | |
| 2. | ಅಭ್ಯರ್ಥಿಯ ತಂದೆ/ತಾಯಿಯ ಹೆಸರು | |
| 3. | ಜನ್ಮ ದಿನಾಂಕ | |
| 4. | ಲಿಂಗ | |
| 5. | ವಿದ್ಯಾರ್ಹತೆ/ಪಡೆದಿರುವ ಶೇ.% ವಾರು ಅಂಕ | |
| | ಎಲ್.ಎಲ್.ಬಿ | |
| | ಎಲ್.ಎಲ್.ಎಂ | |
| 6. | ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಕನ್ನಡ ಭಾಷೆಯಲ್ಲಿ ತೇರ್ಗಡೆ ಹೊಂದಲಾಗಿದೆಯೇ? | |
| 7. | ವೃತ್ತಿ ನೋಂದಾವಣಿ ವಿವರ | |
| 8. | ವೃತ್ತಿ ಅನುಭವ | |
| 9. | ನಿವೃತ್ತಿ ಹೊಂದಿದ ದಿನಾಂಕ (ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಿಗೆ ಮಾತ್ರ) | |
| 10. | ಖಾಯಂ ವಿಳಾಸ | |
| 11. | ಮೊಬೈಲ್ / ದೂರವಾಣಿ ಸಂಖ್ಯೆ | |
| 12. | ಇ-ಮೇಲ್ ವಿಳಾಸ | |

| | | |
|---|---|---|
| 13. | ಅರ್ಜಿದಾರರ/ಅಭ್ಯರ್ಥಿಯ ಸಹಿ | |
| 14. | **ಲಗತ್ತುಗಳು: (ಸ್ವ-ದೃಢೀಕೃತ)**<br>ಎಸ್. ಎಸ್. ಎಲ್.ಸಿ ಅಂಕಪಟ್ಟಿ<br>ಎಲ್.ಎಲ್.ಬಿ/ಎಲ್.ಎಲ್.ಎಂ ಅಂಕಪಟ್ಟಿ<br>ವೃತ್ತಿ ಅನುಭವದ ದೃಢೀಕರಣ | |

ದಿನಾಂಕ: ಸಹಿ:

ಸ್ಥಳ: ಹೆಸರು:

## ಕೆ.ಆರ್.ಇ.ಡಿ.ಎಲ್‌ನಲ್ಲಿ ಗುತ್ತಿಗೆ ಆಧಾರದ ಕಾನೂನು ಸಲಹೆಗಾರರ ಕಾರ್ಯನಿರ್ವಹಣೆ ವಿವರ

- ಕಾನೂನು ಸಲಹೆಗಾರರು ಪೂರ್ಣಾವಧಿ (Full-time) ಆಧಾರದಲ್ಲಿ ಕಾನೂನು ಶಾಖೆಯಲ್ಲಿ ಕಾರ್ಯನಿರ್ವಹಿಸುವುದು.
- ಕಾನೂನು ವಿಷಯಕ್ಕೆ ಸಂಬಂಧಿಸಿದ ಕಡತಗಳನ್ನು ಅವಲೋಕಿಸಿ ಟಿಪ್ಪಣಿಗಳನ್ನು ನೀಡುವುದು.
- ಮಾನ್ಯ ನ್ಯಾಯಾಲಯದ ಆದೇಶಗಳನ್ನು ಅವಲೋಕಿಸಿ ಕೈಗೊಳ್ಳಬೇಕಿರುವ ಕ್ರಮಗಳ ಬಗ್ಗೆ ಸ್ಪಷ್ಟ ಅಭಿಪ್ರಾಯವನ್ನು ನೀಡುವುದು ಹಾಗೂ ಸದರಿ ಆದೇಶಗಳ ಪಾಲನೆ ಅಥವಾ ಮೇಲ್ಮನವಿ ಬಗ್ಗೆ ಸೂಕ್ತ ಕ್ರಮವಹಿಸುವುದು.
- ಕೆ.ಆರ್.ಇ.ಡಿ.ಎಲ್ ಸಂಸ್ಥೆಯ ಕಾರ್ಯಾಲಯದ ಕಛೇರಿಗಳಲ್ಲಿ ಬಾಕಿ ಇರುವ ವಿವಿಧ ನ್ಯಾಯಾಲಯ ಪ್ರಕರಣಗಳ ವಿಲೇವಾರಿಗಾಗಿ ಕ್ರಮವಹಿಸುವುದು.
- ವಿವಿಧ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳ ಮಾಹಿತಿಯನ್ನು ಸಂಗ್ರಹಿಸಿ ಅವುಗಳ ಶೀಘ್ರ ವಿಲೇವಾರಿಗಾಗಿ ಕಾನೂನು ಸಲಹೆಯನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ನೀಡುವುದು.
- ಕೆ.ಆರ್.ಇ.ಡಿ.ಎಲ್ ಸಂಸ್ಥೆಯ ಕಾರ್ಯಾಲಯದ ಕಛೇರಿಗಳಲ್ಲಿ ವ್ಯಾಪ್ತಿಯಲ್ಲಿ ಕೆ.ಆರ್.ಇ.ಡಿ.ಎಲ್ ಪರವಾಗಿ ನೇಮಕವಾಗಿರುವ ವಕೀಲರ ವಿವರ ಪಡೆದು ಬಾಕಿ ಇರುವ ನ್ಯಾಯಾಲಯ ಪ್ರಕರಣಗಳ ವಿಲೇವಾರಿಗಾಗಿ ಸದರಿಯವರು ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಪರಿಶೀಲಿಸಿ ಸೂಕ್ತ ನಿರ್ದೇಶನ ನೀಡಿ ಪ್ರಕರಣಗಳ ವಿಲೇವಾರಿಗೆ ಕ್ರಮವಹಿಸುವುದು.
- ಸಂಸ್ಥೆಯ ಕಾರ್ಯಾಲಯದ ಕಛೇರಿಗಳಿಂದ ಬಂದಂತಹ ಕಡತಗಳ ಬಗ್ಗೆ ಕಾನೂನು ಅಭಿಪ್ರಾಯಗಳನ್ನು/ಸಲಹೆಗಳನ್ನು ಕೊಡುವುದು.
- ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರು ಸೂಚಿಸುವ ಕಾನೂನು/ನಿಯಮಾವಳಿಗಳಿಗೆ ಸಂಬಂಧಿಸಿದ ಇತರೆ ಎಲ್ಲಾ ಕಾರ್ಯಗಳನ್ನು ನಿರ್ವಹಿಸುವುದು.

# ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ

**(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)**
**ನಂ.6/13/1. 10ನೇ ಬ್ಲಾಕ್, 2ನೇ ಹಂತ, ನಾಗರಭಾವಿ, ಬೆಂಗಳೂರು-560 072.**
E-mail: kredlmd@gmail.com Website: https://kredl.karnataka.gov.in

ಕೆ.ಆರ್.ಇ.ಡಿ.ಎಲ್/01/ಆಡಳಿತ/04/2023/
ದಿನಾಂಕ:25.10.2023

**ಅಧಿಸೂಚನೆ**
**ಗುತ್ತಿಗೆ ಆಧಾರದ ಮೇಲೆ ನೇಮಕಾತಿ**

ಸಂಸ್ಥೆಯ ಕಾನೂನು ವ್ಯವಹಾರಗಳಿಗೆ ಸಂಬಂಧಪಟ್ಟ ಕಾರ್ಯಗಳನ್ನು ನಿರ್ವಹಿಸಲು ಗುತ್ತಿಗೆ ಆಧಾರದ ಮೇಲೆ ಎರಡು ವರ್ಷದ ಅವಧಿಗೆ ಕಾನೂನು ಸಲಹೆಗಾರರ ಹುದ್ದೆಗೆ ಈ ಕೆಳಕಂಡ ಅರ್ಹತೆಯಂತೆ ನೇಮಿಸಲು ಉದ್ದೇಶಿಸಿದೆ. ಹುದ್ದೆ : ಕಾನೂನು ಸಲಹೆಗಾರರು. ಹುದ್ದೆಗಳ ಸಂಖ್ಯೆ : 01. ನಿಗದಿಪಡಿಸಿರುವ ಅರ್ಹತೆ : ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು. ಮಾಹೆಯಾನ ಕ್ರೋಢೀಕೃತ ಸಂಭಾವನೆ : ರೂ 65,000/-. (ಪ್ರಸ್ತುತ ಪಡೆಯುತ್ತಿರುವ ಪಿಂಚಣಿ ಹಾಗೂ ನಿಗಮದಿಂದ ಪಾವತಿಸಲಾಗುವ ಸಂಭಾವನೆ ಸೇರಿ ನಿವೃತ್ತ ಸಮಯದಲ್ಲಿ ಪಡೆಯುತ್ತಿದ್ದ ವೇತನಕ್ಕೆ ಮೀರದಂತೆ) Subject to deduction of Income tax as per rules. ವಯೋಮಿತಿ: 60 ರಿಂದ 70 ವರ್ಷಗಳು. ಅರ್ಜಿ ಸಲ್ಲಿಸಲು ಕೊನೆಯ

ದಿನಾಂಕ/ಸಮಯ: 10.11.2023 ಸಂಜೆ 5.30 ಗಂಟೆ. ಹೆಚ್ಚಿನ ಮಾಹಿತಿಗಾಗಿ ಸಂಸ್ಥೆಯ ವೆಬ್ ಸೈಟ್ **https://kredl.karnataka.gov.in** ಗೆ ಭೇಟಿ ನೀಡಿ.

ಪ್ರಧಾನ ವ್ಯವಸ್ಥಾಪಕರು-
ಆಡಳಿತ
ಕೆ.ಆರ್.ಇ.ಡಿ.ಎಲ್